## ಮಾನ್ಯ ಸಂಕೇತಿ ಭಾಂದವರಲ್ಲಿ

## ಕೌಶಿಕ ಲಕ್ಷ್ಮೀಕೇಶವ ದೇವಸ್ಥಾನದ ಜೀರ್ಣೋದ್ಧಾರ ಸಮಿತಿಯವರ ಮನವಿ.

ತಮ್ಮಗೆಲ್ಲರಿಗೂ ತಿಳಿದಿರುವಂತೆ 1973ರಲ್ಲಿ ಮೇಲ್ಕಂಡ ಸಮಿತಿ ಸ್ಥಾಪನೆಯಾಗಿ ಲಕ್ಷ್ಮೀ ಕೇಶವ ದೇವಸ್ಥಾನದ ಅಭಿವೃದ್ಧಿ, ಇದಕ್ಕೆ ಸಂಬಂಧಪಟ್ಟಂತೆ ರಥೋತ್ಸವಾದಿಗಳನ್ನು ತಮ್ಮಗಳ ಎಲ್ಲರ ಉದಾರತೆಯಿಂದ ಇದುವರೆಗೆ ನಿರ್ವಿಘ್ನವಾಗಿ ನಡೆಸಿಕೊಂಡು ಬಂದಿರುತ್ತೆ. ಮುಂದೆಯೂ ಸಹ ಸಮಿತಿ ರೂಪಿಸಿದ ಮುಂದಿನ ಆಗು ಹೋಗುಗಳಲ್ಲಿ ತಮ್ಮ ಸಹಕಾರವನ್ನು ಬಯಸುತ್ತೇವೆ. ಇದೇ 27–11–2005 ರಂದು ಕೌಶಿಕ ಗ್ರಾಮದಲ್ಲಿ ಸಮಿತಿಯ ಸಭೆ ಸೇರಿದ್ದು ಇದರಲ್ಲಿ ಕೆಲವು ನಿರ್ಣಯಗಳನ್ನು ನಿಶ್ಚಯಿಸಲಾಗಿದೆ. ಮೊದಲನೆಯದಾಗಿ ಇದುವರೆಗೂ ವ್ಯವಹರಿಸುತ್ತಿದ್ದ ಮೇಲ್ಕಂಡ ಸಮಿತಿ ಹೆಸರನ್ನು ಇನ್ನು ಮುಂದೆ ಲಕ್ಷ್ಮೀಕೇಶವ ಅಭಿವೃದ್ಧಿ ಸಮಿತಿ ಎಂದು ಬದಲಾಯಿಸಿಕೊಂಡು ಮುಂದುವರೆಯಲು ತೀರ್ಮಾನಿಸಿರುತ್ತೆ.

ತಮಗೆ ಈಗ ತಿಳಿದಿರುವಂತೆ ಕೌಶಿಕ ಗ್ರಾಮದಲ್ಲಿ ತಮ್ಮಗಳೆಲ್ಲರ ಸಹಕಾರದಿಂದಲೇ ಕಟ್ಟಿದ ಲಕ್ಷ್ಮೀ ಕೇಶವ ಕಲ್ಯಾಣ ಮಂಟಪ ಆಡಳಿತ ಮಂಡಳಿಯು, ಇದನ್ನು ಈಗಿರುವ ಹಾಲಿ ಸಮಿತಿಗೆ ವಹಿಸಿಕೊಟ್ಟಿರುತ್ತಾರೆ. ಜವಾಬ್ದಾರಿಯನ್ನು ಸಮಿತಿಯು ಒಪ್ಪಿಕೊಂಡಿರುತ್ತದೆ. ಹಾಲಿ ಈಗ ಇರುವ ಕಲ್ಯಾಣಮಂಟಪದಲ್ಲಿ ಎಲ್ಲ ಸೌಕರ್ಯಗಳಿದ್ದು ಶುಭ ಕಾರ್ಯಗಳನ್ನು ನಡೆಸಲು ಯಾವುದೇ ತೊಂದರೆಯಿರುವುದಿಲ್ಲ. ಈ ಕಲ್ಯಾಣ ಮಂಟಪ ಸ್ಥಾಪಿಸಿರುವುದು ನಮ್ಮ ಜನಾಂಗದವರೇ ಆಗಿರುವುದರಿಂದ, ಇದನ್ನು ಸಮಸ್ತ ಸಂಕೇತಿ ಬಾಂಧವರಿಗೆಲ್ಲ ಉಚಿತವಾಗಿ ನೀಡಲಾಗುವುದು. ಇದಕ್ಕೆ ಪ್ರತಿಫಲವಾಗಿ ಭಾಂದವರು ಕಲ್ಯಾಣಮಂಟಪದ ನಿರ್ವಹಣೆಗಾಗಿ ತಮ್ಮ ಶಕ್ತಿಯಾನುಸಾರ ವಂತಿಗೆ ನೀಡಬೇಕೆಂದು ಪ್ರಾರ್ಥಿಸಿಕೊಳ್ಳುತ್ತೇವೆ. ಇದರಲ್ಲಿ ವಿದುಚ್ಛಕ್ತಿ, ಗ್ಯಾಸಒಲೆ, ಜನರೇಟರ್ ಇವುಗಳ ವೆಚ್ಚವನ್ನು ಸಂದಾಯ ಮಾಡಬೇಕಾಗಿರುತ್ತೆ. ಇದನ್ನು ನಮ್ಮ ಸಕಲ ಬಾಂಧವರು ಉಪಯೋಗಿಸಿಕೊಂಡಲ್ಲಿ ಮೂಲಸ್ಥಾನ, ದೇವರ ಸನ್ನಿದಿಯಲ್ಲಿ ನಡೆಸಿದ ತೃಪ್ತಿಪಡಬಹುದೆಂದು ಇದನ್ನು ತಾವುಗಳು ಸೂಕ್ತವಾಗಿ ಆಲೋಚಿಸಿ ಈ ಸಮಿತಿಯಲ್ಲಿ ಬಾಂಧವರ ಏಳಿಗೆಗೆ ಸಹಕರಿಸಬೇಕೆಂದು ವಿನಂತಿಸುತ್ತೇವೆ. ಈ ವಿಷಯದ ಜೊತೆಯಲ್ಲಿ ಇನ್ನೂ ಸೂಕ್ತ ಕೆಲಸ ಕಾರ್ಯಗಳು ಆಗಬೇಕಾಗಿರುವುದನ್ನು ತಮ್ಮ ಗಮನಕ್ಕೆ ತರಬಯಸುತ್ತೇವೆ. ತಮಗೆ ತಿಳಿದಿರುವಂತೆ ಸುಮಾರು ನೂರು ವರುಷಗಳಿಂದ ಎಳೆಯುತ್ತಿದ್ದ ರಥವು, ಈಗ ಕೆಲವು ವರ್ಷಗಳ ಹಿಂದೆ ನಡೆದ ಅವಗಡದಿಂದ ರಥವನ್ನು ನಿಲ್ಲಿಸಬೇಕೆಂದು ತೀರ್ಮಾನಿಸಿದ್ದೆವು. ಈ ದಿಸೆಯಲ್ಲಿ ಚಿಲ್ಕುಂದ ಶ್ರೀ ನರಸಿಂಹ ಮೂರ್ತಿಗಳ ಪುತ್ರ ಶ್ರೀ ಸೋಮಶೇಖರರವರು ಇಂದಿನ ಕಾಲಕ್ಕೆ ತಕ್ಕಂತೆ ಒಂದು ರಥವನ್ನು ನಿರ್ಮಿಸಿ ಕಳೆದ ವರ್ಷ ರಥೋತ್ಸವವನ್ನು ನಡೆಸಲಾಯಿತು. ಆದರೆ ಈ ದಿಸೆಯಲ್ಲಿ ನಡೆಸಿದರೆ ಹಳೆಯ ಕಾಲದ ವಿಜೃಂಭಣೆಲುಪ್ತವಾಗಿರುತ್ತೆ ಎಂದು ಅನ್ನಿಸುತ್ತದೆ.

ಅದಕ್ಕಾಗಿ ಸಮಿತಿಯು ಈ ದಿಸೆಯಲ್ಲಿ ವಿಸ್ತಾರವಾಗಿ ಸಲಹೆ ಸೂಕ್ತಗಳನ್ನು ಪಡೆದು ಹಾಲಿ ಈಗ ಇರುವ ಮರದ ರಥವನ್ನು ದುರಸ್ತಿ ಪಡಿಸಿ ಉಪಯೋಗಿಸಬಹುದೇ ಎಂದು ಯೋಚಿಸಿದಾಗ ರಥದ ಚಕ್ರಗಳನ್ನು ಹೊಸದಾಗಿ ಜೋಡಿಸಿದಲ್ಲಿ ಇನ್ನು 20 ರಿಂದ 30 ವರ್ಷಗಳವರೆಗೆ ಎಳೆಯ ಬಹುದೆಂದು ವಿಶ್ವ ಕರ್ಮರ ಆದೇಶದ ಮೇರೆಗೆ ರಥವನ್ನು ದುರಸ್ತಿ ಪಡೆಸಲು ಉದ್ದೇಶಿಸಿ, ಇದಕ್ಕೆ ತಗುಲುವ ವೆಚ್ಚವನ್ನು ವಂತಿಗೆಯ ಮುಖಾಂತರ ಪಡೆದು ಕೆಲಸವನ್ನು ಮಾಡಿಸಲು ನಿರ್ಧರಿಸಿದ ಮೇಲೆ ಈಗಾಗಲೆ ಹಿಂದೆ ಕೊಟ್ಟ ಮನವಿಯ ಪ್ರಕಾರ ಬಂದ ವಂತಿಗೆಯನ್ನು ಸೇರಿಸಿ ಉಪಯೋಗಿಸಬೇಕೆಂದು ತೀರ್ಮಾನಿಸಿರುತ್ತೇವೆ. ಇದಕ್ಕೆ ವಂತಿಗೆ ನೀಡಿರುವವರ ಒಪ್ಪಿಗೆ ಇದೆ ಎಂದು ಭಾವಿಸುತ್ತೇವೆ.

## ಇನ್ನು ವಂತಿಗೆ ನೀಡುವ ವಿಚಾರ

ಈ ದಿಸೆಯಲ್ಲಿ ಸಮಿತಿಯವರು ತಮ್ಮಿಂದ ವಾರ್ಷಿಕವಾಗಿ ಮಾರ್ಚ್ ತಿಂಗಳ ಹೊತ್ತಿಗೆ ಸರಿಯಾಗಿ ಪ್ರತಿ ಸಂಕೇತಿ ಕುಟುಂಬದವರೂ ದೇವರ ಕಾಣಿಕೆಯಾಗಿ 150/– ರೂ.ಗಳನ್ನು ಚೆಕ್ಕು ಅಥವಾ ಬ್ಯಾಂಕಿನ ಡ್ರಾಫ್ಟ್ ಮುಖಾಂತರ ಲಕ್ಷ್ಮೀಕೇಶವ ಅಭಿವೃದ್ಧಿ ಸಮಿತಿ ಎಂದು ಕಳುಹಿಸತಕ್ಕದ್ದು. ಇದನ್ನು ಕೌಶಿಕದ ಕರ್ಣಾಟಕ ಬ್ಯಾಂಕ್ ಸಮಿತಿಯ ಲೆಕ್ಕಕ್ಕೆ ನೇರವಾಗಿಯಾದರು ಸರಿ ಇಲ್ಲವಾದಲ್ಲಿ ಈ ಕೆಳಕಂಡ ಅಡ್ರಸ್ಸಿಗೆ ಕಳಿಸತಕ್ಕದ್ದು. ನಗದಾಗಿ ಹಣ ಕಳುಹಿಸಬಾರದೆಂದು ವಿನಂತಿಸಿಕೊಳ್ಳುತ್ತೇವೆ. ಕಳುಹಿಸುವಾಗ ಈ ಕೆಳಗೆ ನಮೂದಿಸಿರುವ ಫಾರಂ ಭರ್ತಿಮಾಡಿ ಕಳಿಸಿದಲ್ಲಿ ಅನುಕೂಲವಾಗುತ್ತೆ. ಕಳುಹಿಸಬೇಕಾದ ಅಡ್ರೆಸ್ಸು :

1. **K.V. Natesh**, Secretary - Teacher, 10/26, First Main, 'Keshava Krupa', Vivekananda Nagar, Channarayapatna. ☎: 08176-252750.
2. **K.N. Gundu Rao,** Vice President – 239, 'Kshitija', Shankaripuram, Hassan. ☎: 08172 268355.
3. **N. Subramanya,** Post Master, Koushika, Hassan Taluk.

ವಿ. ಸೂಚನೆ : ಯಾವುದೇ ವಂತಿಗೆ ನೀಡಿದರೂ ಚೆಕ್ ಮುಖಾಂತರವೇ ಸಮಿತಿಯ ಹೆಸರಿನಲ್ಲಿ ಕಳಿಸುವುದು. ಇದಲ್ಲದೆ ತಮಗೆ ತಿಳಿದಿರುವಂತಹ ಭಾಂದವರಿಗೂ ಈ ಪ್ರತಿಯನ್ನು ತೋರಿಸಿ ಅವರೂ ಸಹ ಕಳುಹಿಸಿಕೊಡಲು ಸಹಕರಿಸಬೇಕಾಗಿ ಕೋರುತ್ತೇವೆ.

---

ಚೆಕ್‌ನ ಜೊತೆಯಲ್ಲಿ ಕಳುಹಿಸಬೇಕಾದ ವಿವರ :

Name and address : Full -

Amount sent – Drawn on Bank Cheque / Draft